# ವೆಂಕಟೇಶ ದಯಮಾಡೋ ವೇದವೇದ್ಯನೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 521.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 302.
3. **Note:** The wordings are as per Ref. 1. The wordings in Ref. 2 are similar to Ref. 1 except few differences which are marked in yellow highlights.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
5. **Note:** Singer has followed lyrics as in Ref. 2.

ರಾಗ: ಆನಂದ ಭೈರವಿ ತಾಳ: ಅಟ್ಟ

ವೇಂಕಟೇಶ ದಯಮಾಡೋ ವೇದ ವೇದ್ಯನೆ
ಪಂಕಜಾಕ್ಷ ಅಭಯವಿತ್ತು ರಕ್ಷಿಸೆನ್ನ ಬೇಗನೆ (ಬೇಗೆನ್ನ ರಕ್ಷಿಸಯ್ಯ) || ಪ ||

ಚಿತ್ತ ಚಂಚಲವ ಬಿಡಿಸೋ ಮತ್ತೆ ಕ್ರೋಧವ ಓಡಿಸೊ
ಭ್ರಾಂತಿ ವಿಷಯಂಗಳು ಬೇಡ ಕಂತುಪಿತ ನಾರಾಯಣ || ೧ ||

ಸೃಷ್ಟಿ (ಮೂವರೊಳಗೆ) ಮೂರರೊಳಗೆ ನೀನೆ ಕಷ್ಟ ಬಡಿಸುವರೇನೊ
ನಷ್ಟ ತನ್ನ ನೋಡಬೇಡೊ ದೃಷ್ಟಿಸಿ ನೋಡೊ ದಯಾಳೊ || ೨ ||

ಭಾಳ ಅಪರಾಧಿ ನಾನು ನಿನ್ನ ಬಳಿಗೆ ಬಂದೆ ನಾನು
ಒಲಿದು ಎನ್ನ ರಕ್ಷಿಸಯ್ಯ ಮೇಲುಗಿರಿ ಪುರಂದರ ವಿಠಲ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಸೃಷ್ಟಿ ಮೂರರೊಳಗೆ** – ಮೂರು ಲೋಕಗಳಲ್ಲಿ.

**ದೃಷ್ಟಿಸಿ ನೋಡೋ** – ನನ್ನ ಕಡೆ ಕಣ್ಣನ್ನು ಹರಿಸು

**ಭಾಳ** – ಬಹಳ.

**ಮೇಲುಗಿರಿ** – ಏಳು ಬೆಟ್ಟಗಳಲ್ಲಿ ಮೇಲಿನದು, ವೆಂಕಟಾಚಲ

**Classification:** Keerthane
**Ankita:** purandara vittala
**Location:** Tirupati
**Category:** Srinivasa Stuti, Bhakti
**Sub-Category:** srinivasa, veda, padma, chitta, sittu, Vishnu, daya, aparadhi, Narayana, daya,
**Pravachana:** NA
**Explanation:** NA